**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ರವರ ನ್ಯಾಯಾಲಯ, ಕೊಪ್ಪ.</u>**

***<u>ಸಿ.ಸಿ. 282/2022</u>***

***<u>ಪಿರ್ಯಾಧಿದಾರರುಃ</u>*** **ಸರ್ಕಾರದ ಪರವಾಗಿ ಹರಿಹರಪುರ ಪೊಲೀಸರು**

**ವಿರುದ್ಧ**

| | | |
|---|---|---|
| ***ಆರೋಪಿತರು*** | *1* | *ಎಲ್. ಪರಮೇಶ ಬಿನ್ ತೋತ್ಯಾನಾಯ್ಕ, 51 ವರ್ಷ, ವಾಸ ಅಡವಿಮಲ್ಲನಕೇರಿ ತಾಂಡ, ವರ್ಕನಹಳ್ಳಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.* |

- - -

**<u>ಆರೋಪಣೆ</u>**

ದಿನಾಂಕ **20.03.2022** ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಹರಿಹರಪುರ ಠಾಣಾ ವ್ಯಾಪ್ತಿಗೆ ಸೇರಿದ ಹರಿಹರಪುರದ ಆಗುಂಬೆ ರಸ್ತೆಯಲ್ಲಿರುವ ತಾಜ್ ಹೋಟೆಲ್ ಮುಂಭಾಗದಲ್ಲಿ ಹಾದು ಹೋಗಿರುವ ಕೊಪ್ಪ-ಆಗುಂಬೆ ರಸ್ತೆಯಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-35-ಬಿ-6610 ಸ್ವಿಫ್ಟ್ ಡಿಸೈರ್ ಕಾರನ್ನು ಕೊಪ್ಪ ಕಡೆಯಿಂದ ಅತೀವೇಗ ಹಾಗೂ ಅಜಾಗರೂಕತೆಯಿಂದ ಸಾರ್ವಜನಿಕ ರಸ್ತೆಯಲ್ಲಿ ಚಾಲನೆ ಮಾಡಿಕೊಂಡು ಬಂದು ಚಾಸಾ.1 ಸುರೇಶ ರವರು ಚಾಲನೆ ಮಾಡುತ್ತಿದ್ದ ಪ್ಯಾಸೆಂಜರ್ ಆಟೋರಿಕ್ಷಾ ನಂ. ಕೆಎ-18/ಸಿ-1164 ಕ್ಕೆ ಓವರ್ ಟೇಕ್ ಮಾಡಿ ಡಿಕ್ಕಿ ಹೊಡೆಸಿ ಅಪಘಾತವನ್ನುಂಟು ಮಾಡಿದ್ದಿರೀ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾ. ದಂ. ಸಂ. ಕಲಂ **279 ರ** ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮುಂದುವರೆದು ಆರೋಪಿಯಾದ ನೀವು ಮೇಲ್ಕಂಡಂತೆ ಅಪಘಾವವನ್ನುಂಟು ಮಾಡಿದ ಪರಿಣಾಮ ಚಾಸಾ.1 ರವರಿಗೆ ಬಲಕೆನ್ನೆಗೆ, ಎದೆಯ ಬಲಭಾಗಕ್ಕೆ ಪೆಟ್ಟಾಗಿ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾ. ದಂ. ಸಂ. ಕಲಂ **337 ರ** ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ

ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮುಂದುವರೆದು ಆರೋಪಿಯಾದ ನೀವು ಮೇಲ್ಕಂಡಂತೆ ಅಪಘಾವವನ್ನುಂಟು ಮಾಡಿದ ಪರಿಣಾಮ ಆಟೋರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದ ಚಾಸಾ.4 ಜಯಮ್ಮ ರವರಿಗೆ ಬಲಪಕ್ಕೆಗೆ, ಎರಡು ಕೈಗಳ ಮುಂದೋಳಿಗೆ, ಬಲ ಮೊಣಕಾಲಿಗೆ, ಹಾಗೂ ಬಲಗಾಲಿನ ಪಾದಕ್ಕೆ ಪೆಟ್ಟಾಗಿ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾ. ದಂ. ಸಂ. ಕಲಂ **338 ರ** ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-35-ಬಿ-6610 ಸ್ವಿಫ್ಟ್ ಡಿಸೈರ್ ಕಾರಿಗೆ ಪರವಾನಿಗೆ ಚಾಲ್ತಿಯಲ್ಲಿ ಇಲ್ಲದೆ ಸದರಿ ಕಾರನ್ನು ಸಾರ್ವಜನಿಕ ಸ್ಥಳದಲ್ಲಿ ಚಾಲನೆ ಮಾಡಿ ಅಪಘಾತವನ್ನುಂಟು ಮಾಡಿದ್ದೀರಿ. ಆದ ಕಾರಣ ನೀವು ಮೋಟಾರು ವಾಹನ ಕಾಯ್ದೆ ಕಲಂ 196 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಮೇಲಿನ ಆರೋಪಣೆಯನ್ನು ಓದಿ ವಿವರಿಸಿದ್ದು ಅರ್ಥವಾಯಿತೇ?

ತಿಳಿಯಿತು.

ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ವಿವರಿಸಿ, ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 15.09.2025.

ಸಹಿ/- 15.09.2025.
(ಶ್ರೀಮತಿ ನಂದಿನಿ ಎಂ.ಎನ್. )
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂಃ ಕೊಪ್ಪ.